# ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ

(CIN) : U40109KA2004SGC035177
ನಿಗಮ ಕಛೇರಿ : ನಂ. 29, ವಿಜಯನಗರ,
2ನೇ ಹಂತ, ಹಿನಕಲ್
ಮೈಸೂರು–570 017
www.cescmysore.org

ರವರ ಕಛೇರಿ
ಸಹಾಯಕ ಕಾರ್ಯಪಾಲಕ ಇಂಜಿನಿಯರ್(ವಿ)
ಕಾರ್ಯ ಮತ್ತು ಪಾಲನೆ ಉಪ–ವಿಭಾಗ,
ಸೆಸ್ಕ್, ಬೇಲೂರು.
ದೂ.ಸಂ. 08177–222223
E.Mail : aeehsnbelur@rediffmail.com


ಕ್ರಮಾಂಕ : ಸ.ಕಾ.ಇಂ(ವಿ)/ಸ.ಇಂ(ತಾಂ)/ಬೇ/2019-20/F-13/ 967.68. ದಿನಾಂಕ : 03.06.19

## ಜನಸಂಪರ್ಕ ಸಭೆಯ ನಡವಳಿಗಳು

ದಿನಾಂಕ : 29.5.19 ರ ಬುಧವಾರದಂದು ಮಾನ್ಯ ಜಗದೀಶ್, ಕಾರ್ಯಪಾಲಕ ಇಂಜಿನಿಯರ್(ವಿ), ಸೆಸ್ಕ್, ಸಕಲೇಶಪುರ ರವರ ಅಧ್ಯಕ್ಷತೆಯಲ್ಲಿ ಬೇಲೂರು ಉಪವಿಭಾಗ ಕಛೇರಿಯಲ್ಲಿ ನಡೆಸಿದ ಜನಸಂಪರ್ಕ ಸಭೆಯ ನಡಾವಳಿಗಳು.

**ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳ ವಿವರ ;**

1. ಶ್ರೀ ಜಗದೀಶ್, ಕಾ. ಇಂ(ವಿ), ಸೆಸ್ಕ್, ಸಕಲೇಶಪುರ ವಿಭಾಗ.
2. ಶ್ರೀ ರಂಗೇಗೌಡ, ಸ.ಕಾ.ಇಂ(ವಿ), ಸೆಸ್ಕ್, ಬೇಲೂರು ಉಪವಿಭಾಗ.
3. ಶ್ರೀ ಹರೀಶ್, ಲೆಕ್ಕಾಧಿಕಾರಿ, ಸೆಸ್ಕ್, ಸಕಲೇಶಪುರ ವಿಭಾಗ.
4. ಶ್ರೀ ನಿಕೇಶಕುಮಾರ್ ಸಿ.ಎನ್. ಸಹಾಯಕ ಇಂಜಿನಿಯರ್(ತಾಂ), ಸೆಸ್ಕ್, ಬೇಲೂರು ಉಪವಿಭಾಗ.
5. ಶ್ರೀ ಕುಮಾರ್ ಎನ್. ಡಿ. ಸಹಾಯಕ ಇಂಜಿನಿಯರ್(ವಿ), ಸೆಸ್ಕ್, ಬೇಲೂರು ನಗರ ಶಾಖೆ.
6. ಶ್ರಿ ಜಿ. ಶಶಿಕಿರಣ್, ಕಿರಿಯ ಇಂಜಿನಿಯರ್(ವಿ), ಸೆಸ್ಕ್, ತೊಳಲು ಶಾಖೆ.

**ಶ್ರೀಯುತರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿ/ನೌಕರರುಗಳನ್ನು ಸ್ವಾಗತಿಸುವ ಮೂಲಕ ಸಭೆಯನ್ನು ಮಧ್ಯಾಹ್ನ 3 : 30 ಗಂಟೆಗೆ ಪ್ರಾರಂಭ ಮಾಡಿದರು.**

---

**ಜನಸಂಪರ್ಕ ಸಭೆಯಲ್ಲಿ ದಾಖಲಾದ ದೂರಿನ ವಿವರಗಳು ಈ ಕೆಳಕಂಡಂತೆ ಇರುತ್ತದೆ ;**

1. ಶ್ರೀ ಶಿವಕುಮಾರ್, ಮಧಘಟ್ಟ ರವರು ತಾವು ಉಮಾ ಕೋಂ ಶಿವಕುಮಾರ್ ಹೆಸರಿನಲ್ಲಿ ಗಂಗಾಕಲ್ಯಾಣ ಯೋಜನೆಯಡಿಯಲ್ಲಿ ನೊಂದಣಿ ಮಾಡಿಸಿದ್ದು, ಇದುವರೆಗೂ ಸಂಬಂಧಿಸಿದ ಏಜೆನ್ಸಿಯವರು ಕೆಲಸ ನಿರ್ವಹಿಸಿರುವುದಿಲ್ಲ ಹಾಗೂ ಆದಷ್ಟು ಬೇಗ ಕೆಲಸ ನಿರ್ವಹಿಸಿಕೊಡಬೇಕೆಂದು ಸಭೆಯಲ್ಲಿ ಕೋರಿದರು.

   ಇದಕ್ಕೆ ಸಂಬಂಧಿಸಿದಂತೆ ಸಭೆಯ ಅಧ್ಯಕ್ಷರು ಏಜೆನ್ಸಿಯವರಿಗೆ ದೂರವಾಣಿ ಮುಖಾಂತರ ಮಾತನಾಡಿ ಒಂದು ವಾರದೊಳಗೆ ಕೆಲಸ ನಿರ್ವಹಿಸುವಂತೆ ಸೂಚಿಸಿದರು ಹಾಗೂ ಸಂಬಂಧಿಸಿದವರಿಗೆ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

2. ಶ್ರೀ ಲಕ್ಷ್ಮಣ ಹಿರಿಗದ್ದೆ ರವರು UNIP ಯೋಜನೆಯಡಿಯಲ್ಲಿ ಇದೂವರೆಗೂ ಪರಿವರ್ತಕವನ್ನು ನೀಡಿರುವುದಿಲ್ಲ ಹಾಗೂ ಹಿಂದಿನ ಮೂರು ಜನಸಂಪರ್ಕ ಸಭೆಯಲ್ಲೂ ಕೇಳುತ್ತಿರುವುದಾಗಿ ತಿಳಿಸುತ್ತಾ ಈವರೆಗೂ ಪರಿವರ್ತಕವನ್ನು ನೀಡಿಲ್ಲದಿರುವುದಕ್ಕೆ ಆಕ್ಷೇಪ ವ್ಯಕ್ತಪಡಿಸಿದರು.

   ಸಭೆಯ ಅಧ್ಯಕ್ಷರು ಈ ವಿಷಯಕ್ಕೆ ಸಂಬಂಧಿಸಿದಂತೆ UNIP ಯೋಜನೆಯಡಿಯಲ್ಲಿ ಅನುದಾನ ಇಲ್ಲದ ಕಾರಣ ಪರಿವರ್ತಕವನ್ನು ನೀಡಿರುವುದಿಲ್ಲ ಹಾಗೂ ಇದಕ್ಕೆ ಸಂಬಂಧಿಸಿದಂತೆ ನಿಗಮ ಕಛೇರಿಗೆ ಶೀಘ್ರವಾಗಿ ಅನುದಾನ ನೀಡುವಂತೆ ಪತ್ರ ಬರೆಯಲಾಗುವುದು ಎಂದು ತಿಳಿಸಿದರು.

3. ಶ್ರೀ ನಂಜೇಗೌಡ ಬಿನ್ ಸಿದ್ದಮಲ್ಲಪ್ಪ ರವರು ಹಗರೆಯಲ್ಲಿರುವ ಲೇಔಟ್ ನಲ್ಲಿ 5 ಮನೆ ನಿರ್ಮಾಣ ಮಾಡಿಸಿದ್ದು ಸದರಿ ಮನೆಗಳಿಗೆ ವಿದ್ಯುತ್ ಸಂಪರ್ಕ ನೀಡುವಂತೆ ಕೋರಿದರು.

   ಇದಕ್ಕೆ ಸಂಬಧಿಸಿದಂತೆ ಸಭೆಯ ಅಧ್ಯಕ್ಷರು KERC ನಿಯಮಾವಳಿ ಪ್ರಕಾರ 5 ಮನೆಗಳಿಗೆ ಪ್ರತ್ಯೇಕವಾಗಿ ವಿದ್ಯುತ್ ಸಂಪರ್ಕವನ್ನು ನೀಡಲು ಸಾಧ್ಯವಿಲ್ಲ, ವಸತಿ ಬಡಾವಣೆ ಅಭಿವೃದ್ಧಿ ನಿಯಮಾವಳಿಯ ಪ್ರಕಾರ ಅರ್ಜಿಯನ್ನು ಕಛೇರಿಯಲ್ಲಿ ನೊಂದಾಯಿಸಿದ್ದಲ್ಲಿ ವಿದ್ಯುತ್ ಸಂಪರ್ಕ ನೀಡಲು ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

4. ಅ) ಶ್ರೀ ಗುರುಮೂರ್ತಿ, ಹೊನ್ನೇನಹಳ್ಳಿ ಹಾಗೂ ಗ್ರಾಮಸ್ಥರು ರವರುಗಳು ಕುಡಿಯುವ ನೀರಿನ ಸ್ಥಾವರಕ್ಕೆ ವಿದ್ಯುತ್ ಸಂಪರ್ಕ ಕಲ್ಪಿಸಿಕೊಡಬೇಕೆಂದು ಕೋರಿದರು.

   ಸಭೆಯ ಅಧ್ಯಕ್ಷರು ಇದಕ್ಕೆ ಸಂಬಂಧಿಸಿದಂತೆ ಉಪವಿಭಾಗ ಕಛೇರಿಯಲ್ಲಿ ಅರ್ಜಿಯನ್ನು ನೊಂದಾಯಿಸಿದಲ್ಲಿ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಆ). ಮಾಳೇನಹಳ್ಳಿ ಗ್ರಾಮದಲ್ಲಿ ವಿದ್ಯುತ್ ಕಂಬಗಳು ಹಾಳಾಗಿದ್ದು ಮತ್ತು ಮಾರ್ಗಗಳು ತೀರ ಕೆಳಮಟ್ಟದಲ್ಲಿದ್ದು ಮಧ್ಯಂತರ ಕಂಬಗಳನ್ನು ಅಳವಡಿಸಿಕೊಡಬೇಕೆಂದು ಕೋರಿದರು.

ಇದಕ್ಕೆ ಸಂಬಂಧಿಸಿದಂತೆ, ಬೇಲೂರು ಶಾಖಾಧಿಕಾರಿಯವರಿಗೆ ಸ್ಥಳ ಪರಿಶೀಲಿಸಿ ಕ್ರಮ ಕೈಗೊಳ್ಳುವಂತೆ ಸಭೆಯ ಆಧ್ಯಕ್ಷರು ಸೂಚಿಸಿದರು.

ಇ). ಹನಿಕೆ ಗ್ರಾಮದಲ್ಲಿ ಪ್ರೌಢಶಾಲೆ ಮತ್ತು ಪ್ರಾಥಮಿಕ ಶಾಲೆಯ ಆವರಣದಲ್ಲಿರುವ ಪರಿವರ್ತಕ ಮತ್ತು ಮಾರ್ಗವನ್ನು ಸ್ಥಳಾಂತರಿಸಿಕೊಡುವಂತೆ ಕೋರಿದರು.

ಸಭೆಯ ಅಧ್ಯಕ್ಷರು ಇದಕ್ಕೆ ಸಂಬಂಧಿಸಿದಂತೆ ಸಭೆಯಲ್ಲಿ ಶಾಲೆಯ ಹತ್ತಿರವಿರುವ ಪರಿವರ್ತಕ ಮತ್ತು ಮಾರ್ಗಗಳನ್ನು ಅರ್ಜಿ ರಹಿತ ನಿಗಮದ ವತಿಯಿಂದ ಸ್ಥಳಾಂತರಿಸಲು ಸೂಕ್ತ ಕ್ರಮ ಕೈಗೊಳ್ಳಲು ಎಲ್ಲಾ ಶಾಖಾಧಿಕಾರಿಗಳಿಗೆ ಸೂಚಿಸಲಾಯಿತು.

ಈ). ಕಿರೇಹಳ್ಳಿ ಗ್ರಾಮ ಮತ್ತು ಕೆರೆಗೆ ಹೋಗುವ ದಾರಿಯಲ್ಲಿ ಅಡ್ಡಲಾಗಿರುವ ವಿದ್ಯುತ್ ಕಂಬಗಳನ್ನು ಸೂಕ್ತ ಸ್ಥಳಕ್ಕೆ ಸ್ಥಳಾಂತರಿಸಿಕೊಡುವಂತೆ ತಿಳಿಸಿದರು.

ಇದಕ್ಕೆ ಸಂಬಂಧಿಸಿದಂತೆ ಸಭೆಯ ಅಧ್ಯಕ್ಷರು ಹಳೇಬೀಡು ಶಾಖಾಧಿಕಾರಿಯವರಿಗೆ ಸ್ಥಳ ಪರಿಶೀಲಿಸಿ ವರದಿ ನೀಡಿದ ನಂತರ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

5. ಶ್ರೀ ಉಮೇಶ, ದಾಸಗೋಡನಹಳ್ಳಿ ರವರು ತಮ್ಮ ಗಂಗಾ ಕಲ್ಯಾಣ ಪರಿವರ್ತಕವು ಸುಟ್ಟುಹೋಗಿದ್ದು ಬದಲಾಯಿಸಿ ಕೊಡಬೇಕೆಂದು ಕೋರಿದರು.

ಸಭೆಯ ಅಧ್ಯಕ್ಷರು ಇದಕ್ಕೆ ಸಂಬಂಧಿಸಿದಂತೆ ಹಳೇಬೀಡು ಶಾಖಾಧಿಕಾರಿಯವರಿಗೆ ಸ್ಥಳ ಪರಿಶೀಲಿಸಿ ಕ್ರಮ ಕೈಗೊಳ್ಳುವಂತೆ ಸೂಚಿಸಿದರು.

6. ಶ್ರೀ ಕೃಷ್ಣೇಗೌಡ, ಗುತ್ತಿಗೆದಾರರು ತೊಳಲು ಫೀಡರ್‌ನಲ್ಲಿ ಅಡಚಣೆ ಜಾಸ್ತಿಯಿದ್ದು ಪ್ರತ್ಯೇಕ ಫೀಡರ್ ನಿರ್ಮಿಸಿಕೊಡಬೇಕೆಂದು ತಿಳಿಸಿದರು.

ಇದಕ್ಕೆ ಸಂಬಂಧಿಸಿದಂತೆ ಈಗಾಗಲೇ ತೊಳಲು ಶಾಖಾಧಿಕಾರಿಯವರು ಸದರಿ ಕಾಮಗಾರಿಗೆ ಅಂದಾಜು ಪಟ್ಟಿಯನ್ನು ತಯಾರಿಸಿ ವಿಭಾಗೀಯ ಕಛೇರಿಗೆ ಸಲ್ಲಿಸಿದ್ದು ಕ್ರಮ ಕೈಗೊಳ್ಳಲಾಗುವುದು ಎಂದು ಸಭೆಯ ಅಧ್ಯಕ್ಷರು ತಿಳಿಸಿದರು.

7. ಶ್ರೀ ದೇವೇಗೌಡ, ಹೊನ್ನೇನಹಳ್ಳಿ ರವರು ತಮ್ಮ ಕ್ರಷರ್‌ಗೆ ನಿರಂತರವಾಗಿ ವಿದ್ಯುತ್ ಪೂರೈಕೆಯಲ್ಲಿ ಅಡಚಣೆಯಾಗುತ್ತಿದ್ದು, ಹನಿಕೆ ಫೀಡರ್‌ಗೆ ಸಂಬಂಧಿಸಿದಂತೆ ಲಿಂಕ್ ಲೈನ್ ಮಾಡಿ ಸಮಸ್ಯೆಯನ್ನು ಬಗೆಹರಿಸಿ ಕೊಡಬೇಕೆಂದು ಕೋರಿದರು ಹಾಗೂ ನಮ್ಮ ಸ್ಥಾವರವು BMD cross ಆಗಿರುತ್ತದೆ, ಹೆಚ್ಚುವರಿ ಭಾರದ ಅಗತ್ಯವಿದ್ದು, ಅದನ್ನು ಕಲ್ಪಿಸಿಕೊಡುವಂತೆ ಕೋರಿದರು.

ಸಭೆಯ ಅಧ್ಯಕ್ಷರು ಇದಕ್ಕೆ ಸಂಬಂಧಿಸಿದಂತೆ ಬೇಲೂರು ಶಾಖಾಧಿಕಾರಿಯವರು ಹನಿಕೆ ಲಿಂಕ್ ಲೈನ್ ಅಂದಾಜು ಪಟ್ಟಿಯನ್ನು ಈಗಾಗಲೇ ವಿಭಾಗೀಯ ಕಛೇರಿಗೆ ಸಲ್ಲಿಸಿದ್ದು, ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸುತ್ತಾ ಹೆಚ್ಚುವರಿ ಭಾರ ಪಡೆಯಲು ಉಪವಿಭಾಗ ಕಛೇರಿಯಲ್ಲಿ ಅರ್ಜಿಯನ್ನು ನೊಂದಾಯಿಸುವಂತೆ ತಿಳಿಸಿದರು.

8. ಶ್ರೀ ಮಂಜುನಾಥ್, ಗುತ್ತಿಗೆದಾರರು ತಮಗೆ 20 ಸಂಖ್ಯೆಯ GOS ಅಳವಡಿಸಲು ಅವಾರ್ಡ್ ಆಗಿದ್ದು ಇದುವರೆಗೂ ಕೆಲಸ ನಿರ್ವಹಿಸುವುದಕ್ಕೆ ಅಗತ್ಯವಿರುವ ಸಾಮಗ್ರಿಗಳನ್ನು ಒದಗಿಸಿರುವುದಿಲ್ಲ ಎಂದು ತಿಳಿಸಿದರು.

ಇದಕ್ಕೆ ಸಂಬಂಧಿಸಿದಂತೆ ಬೇಲೂರು ಶಾಖಾಧಿಕಾರಿಯವರು GOS ಅಳವಡಿಸಲು Matching ಸಾಮಗ್ರಿಗಳಾದ H-frame, Disk insulator ಉಗ್ರಾಣದಲ್ಲಿ ಲಭ್ಯವಿರದ ಕಾರಣ ಕೆಲಸ ನಿರ್ವಹಿಸಲು ಸಾಧ್ಯವಾಗಿರುವುದಿಲ್ಲ ಎಂದು ತಿಳಿಸಿದರು. ನಂತರ ಸಭೆಯ ಅಧ್ಯಕ್ಷರು ಕೊರತೆ ಇರುವ ಸಾಮಗ್ರಿಗಳಿಗೆ PTK ಯೋಜನೆಯಡಿಯಲ್ಲಿ ಅಂದಾಜು ಪಟ್ಟಿಯನ್ನು ಸಲ್ಲಿಸುವಂತೆ ತಿಳಿಸಿದರು.

9. ಶ್ರೀ ರವಿ, ಯೋಗೇಶ್, ಕೃಷ್ಣೇಗೌಡ ಹಾಗೂ ಇತರೆ ಗುತ್ತಿಗೆದಾರರುಗಳು ಮಳೆಗಾಳಿಗೆ ಮರಿದಿರುವ Department ಕೆಲಸ ನಿರ್ವಹಿಸಲು Labour Licence, PF & GST ಇರುವುದಿಲ್ಲ, ಇದಕ್ಕೆ ಸಂಬಂಧಿಸಿದಂತೆ PF ರಹಿತ Department ಕೆಲಸ ನಿರ್ವಹಿಸಲು ಅನುಮತಿ ನೀಡಬೇಕೆಂದು ಕೋರಿದರು.

ಇದಕ್ಕೆ ಸಂಬಂಧಿಸಿದಂತೆ ಲೆಕ್ಕಾಧಿಕಾರಿಯವರು PF ಕಛೇರಿಯಲ್ಲಿ ವಿಚಾರಿಸಿ ಕ್ರಮ ಕೈಗೊಳ್ಳಬೇಕೆಂದು ಗುತ್ತಿಗೆದಾರರಿಗೆ ಸಭೆಯ ಅಧ್ಯಕ್ಷರು ಸೂಚಿಸಿದರು.

**ಶ್ರೀಯುತರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿ/ನೌಕರರುಗಳನ್ನು ವಂದಿಸುವ ಮೂಲಕ ಸಭೆಯನ್ನು ಸಂಜೆ 5 : 30 ಕ್ಕೆ ಮುಕ್ತಾಯಗೊಳಿಸಲಾಯಿತು.**

ಸಹಾಯಕ ಕಾರ್ಯಪಾಲಕ ಇಂಜಿನಿಯರ್(ವಿ)
ಕಾ ಮತ್ತು ಪಾ ಉಪ–ವಿಭಾಗ, ಸೆಸ್ಕ್, ಬೇಲೂರು.

*ಯಥಾ ಪ್ರತಿಗಳನ್ನು* ;

1. ಅಧೀಕ್ಷಕ ಇಂಜಿನಿಯರ್(ವಿ), ಕಾ ಮತ್ತು ಪಾ ವೃತ್ತ, ಚಾ.ವಿ.ಸ.ನಿ.ನಿ., ಹಾಸನ ರವರ ಆದ್ಯ ಗಮನಕ್ಕೆ ಸಲ್ಲಿಸಿದೆ.
2. ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾ ಮತ್ತು ಪಾ ವಿಭಾಗ, ಚಾ.ವಿ.ಸ.ನಿ.ನಿ., ಸಕಲೇಶಪುರ ರವರ ಆದ್ಯ ಗಮನಕ್ಕೆ ಸಲ್ಲಿಸಿದೆ.
3. ಕಛೇರಿ ಪ್ರತಿ.